

## ಕವಿತೆ



ಎಚ್. ಡುಂಡಿರಾಜ್
ಕಲೆ: ರೂಪಶ್ರೀ ಕಲ್ಲಿಗನೂರು

# ಪರಿಚಯ

ದಿನವೂ ಮುಂಜಾನೆ ವಾಕಿಂಗ್ ಮಾಡುತ್ತೇನೆ
ಆರೋಗ್ಯ ಕಾಪಾಡಿಕೊಳ್ಳಲು
ಅನಿವಾರ್ಯವಾಗಿ ಬರುವ ರೋಗ, ಸಾವನ್ನು
ಆದಷ್ಟು ಮುಂದಕ್ಕೆ ತಳ್ಳಲು

ಅದೇ ಬೀದಿಯಲ್ಲಿ ಅದೇ ಸಮಯದಲ್ಲಿ
ನಡೆಯುತ್ತಿರುವಾಗ ಪ್ರತೀ ದಿನ
ಎದುರಾಗಿ ಹಾಗೇ ಮುಂದೆ ಹೋಗುವರು
ದಿನವೂ ಕಾಣುವ ಅದೇ ಜನ

ಬರುತ್ತಾರೆ ಕೆಲವರು ಹರಟುತ್ತ ನಗುತ್ತ
ತಮ್ಮ ಗೆಳೆಯ ಗೆಳತಿಯರ ಜೊತೆ
ಇನ್ನು ಕೆಲವರು ಸಂಗಾತಿಯೊಂದಿಗೆ
ತೋಡಿಕೊಳ್ಳುತ್ತ ಏನೋ ವ್ಯಥೆ

ಚೈನು ಹಿಡಿದುಕೊಂಡು ಎಗರಾಡುತ್ತಾ
ಸಾಕು ನಾಯಿ ಎಳೆಯುವವರು
ಕೆಳಗೆ ನೋಡದೆ ಯಾವುದೋ ಗುಂಗಲ್ಲಿ
ಸಗಣಿ, ಗಲೀಜು ತುಳಿಯುವವರು

ಕಿಸಿಕಿಸಿ ನಗುತ್ತ ಸಾಗುವರು ಯುವತಿಯರು
ಕಿವಿಗೆ ಬ್ಲೂ ಟೂತ್ ಸಿಕ್ಕಿಸಿಕೊಂಡು
ಅವರತ್ತ ನೋಟಹರಿಸುತ್ತಾರೆ ಗೃಹಸ್ಥರು
ತುಂಬಿ ತುಳುಕುವ ಚೆಲುವು ಕಂಡು

ಸೂಚನೆ ಧಿಕ್ಕರಿಸಿ ಪಾರ್ಕಿನ ಗಿಡಗಳಿಂದ
ಹೂವುಗಳನ್ನು ಕೊಯ್ಯುವವರು
ವಾಕಿಂಗ್ ಮುಗಿಸಿ ನಂದಿನಿ ಬೂತಿನಿಂದ
ಹಾಲು, ಮೊಸರು ಒಯ್ಯುವವರು

ಅದೇ ಮುಂಡದ ಮೇಲೆ ಅದೇ ರುಂಡ
ಗೊತ್ತಿರುವುದು ಇಷ್ಟು ಮಾತ್ರ
ದಿನವೂ ಸಿಕ್ಕರೂ ನಗುವಿಲ್ಲ, ಮಾತಿಲ್ಲ
ತಿಳಿದಿಲ್ಲ ಹೆಸರು ಕುಲಗೋತ್ರ

ಕೊನೆಗೂ ಇಂದು, ದಿನವೂ ಕಾಣುತ್ತಿದ್ದ
ಒಬ್ಬರ ಹೆಸರು ತಿಳಿಯಿತು
ತಂತಿ ಕಂಬದಲ್ಲಿ ಅವರ ಭಾವಚಿತ್ರ
ಶ್ರದ್ಧಾಂಜಲಿ ಸಂದೇಶವಿತ್ತು

